ಕವಿತೆ




## ಪಿ.ಎಸ್. ರಮೇಶ್

ಕಲೆ: ಸೌಮ್ಯ ಪ್ರಭು ಕಲ್ಯಾಣ್‌ಕರ್


# ಕಂಬಗಳು



ದೇಶದ ತುಂಬ ಕಂಬಗಳು
ನಾವೇ ಚಂದ ಕೆತ್ತಿದ
ತಲೆ ಎತ್ತಿ ನೋಡಿರೆಂದು ನೆಟ್ಟ
ಕಂಬಗಳು

ನಮ್ಮ ಸುತ್ತ ಕೆಲವರು ಹೀಗೇ
ನೆಲದಲಿ ನಿಂತರೂ
ಮೋಡವ ಮುತ್ತುವ ದುಂಬಿಗಳು
ನುಣ್ಣನೆ ತಣ್ಣನೆ ಕಂಬಗಳು

ಎತ್ತರ, ಇನ್ನೂ ಎತ್ತರ ಬೆಳೆದರೂ
ಎಂದಿಗೂ ಅಪ್ಪದ,
ಅಪ್ಪೀ ತಪ್ಪೀ ತಾಕಿದರೆ ಕಿಡಿ ಕಾರುವ
ಟೊಳ್ಳು ಬಿದಿರು ಬೊಂಬುಗಳು

ಹಸಿರು ಹುಲ್ಲಿನ ಮೇಲೆ
ಸಂಜೆಯ ನೆರಳೂ ಸಹ
ಸಮಾನಾಂತರ ಗೆರೆಗಳು

ಗುಬ್ಬಿಗೆ ಗೂಡು ಕಟ್ಟಲು ದಕ್ಕದ
ತಮ್ಮ ಮುಖಕೇ ಬೆಳಕನು ಹಿಡಿದ
ಬಾಗದೆ ಬೀಗುವ
ಗಾಳಿಗೆ ಬೀಳುವ
ಲಾಂದ್ರಗಳು

ಸುಡುವ ಬಿಸಿಲಿಗೆ
ಸುರಿವ ಮಳೆಗೆ
ಇವು ಅಲ್ಲ ಕೊಡೆಗಳು
ತಬ್ಬುವುದಿಲ್ಲ ಹಸಿರು ಬಳ್ಳಿಗಳು
ಕಂಬಗಳು, ಬರೀ ಕಂಬಗಳು.


Printed and Published by B.A. Ravi on behalf of **The Printers (Mysore) Private Ltd.** Printed at M/s. Rajhan's Enterprises, No.134, 4th Main Road, Industial Town, Rajajinagar, Bangalore - 560 044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560 074. Editor: **K.N. SHANTH KUMAR.**

Editorial Office: 75, M.G. Road, Bengaluru - 560 001, E-mail: editormy@mayura.co.in, Phone: 080-45557333, Editorial: 45557264, Circ: 45557200/220,

© All rights reserved. Reproduction in whole or in part without permission is prohibited.
RNI No 17129/68